**ದಿಃ 27.03.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ನಂಬರ 2 ರ ಪರ ವಕೀಲರವರಿಂದಃ</u>**

1) ನನ್ನ ಮಗನ ಜನನ ದಿ:29.11.2009 ರಂದು ಗೋಕಾಕಿನ ಬೆನ್ನಾಡಿ ಆಸ್ಪತ್ರೆಯಲ್ಲಿ ಆಗಿರುತ್ತದೆ. ಸಾಕ್ಷಿಗೆ ಸದರಿ ಆಸ್ಪತ್ರೆಯವರು 2 ನೇ ಪ್ರತಿವಾದಿಗೆ ನೀಡಿದ್ದ ಜನನ ವರದಿಯನ್ನು ತೋರಿಸಲಾಗಿ ಅದರಲ್ಲಿ ವಾದಿಯ ಜನನ ದಿನಾಂಕಃ 29-11-2007 ಎಂದು ನಮೂದಿಸಿರುವುದನ್ನು ಓದಿ ಹೇಳಲಾಗಿ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1ರ ಪ್ರಕಾರ 2 ನೇ ಪ್ರತಿವಾದಿ ವಾದಿಯ ಜನ್ಮ ದಿನಾಂಕವನ್ನು ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ವಾದಿಯ ಜನನದ ಸಮಯದಲ್ಲಿ ಖಾಯಂ ವಿಳಾಸವನ್ನು ಮೂಡಲಗಿ ಎಂದು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ರ ಆಧಾರದ ಮೇಲೆ 2 ನೇ ಪ್ರತಿವಾದಿ ಖಾಯಂ ವಿಳಾಸವನ್ನು ಬರೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರ ಖಾಯಂ ವಿಳಾಸ ಚಚಡಿ, ತಾಃ ಯರಗಟ್ಟಿ ಇದ್ದು, ನಿಡಿ-1 ರಲ್ಲಿ ತಪ್ಪಾಗಿ ನಮೂದು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ದಿಃ 29-11-2009 ರಂದು ಜನಿಸಿರುತ್ತಾನೆ ಎಂದು ತೋರಿಸಲು ಸದರಿ ಆಸ್ಪತ್ರೆಯಿಂದ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ಸದರಿ ಆಸ್ಪತ್ರೆಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

2) ವಾದಿಗೆ ಶಾಲೆಗೆ ಸೇರಿಸುವಾಗ ನಾವು ನೀಡಿದ ಮಾಹಿತಿಯ ಆಧಾರದ ಮೇಲೆ ವಿವರಗಳನ್ನು ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ವಾದಿಯ ಜನನ ಪ್ರಮಾಣ ಪತ್ರವನ್ನು ಶಾಲೆಯವರಿಗೆ ನೀಡಿರಲಿಲ್ಲ. ನಿಪಿ-6 ರಲ್ಲಿ ನಾವು ಮೌಖಿಕವಾಗಿ ಹೇಳಿದ ಮಾಹಿತಿಯ ಮೇರೆಗೆ ವಾದಿಯ ಜನನ ದಿನಾಂಕವನ್ನು ಬರೆದುಕೊಟ್ಟಿರುತ್ತಾರೆ.

ನಿಪಿ-6 ನ್ನು ನೀಡಿದ ಸಿಬ್ಬಂದಿಯನ್ನು ಸಾಕ್ಷಿಯನ್ನಾಗಿ ವಿಚಾರಣೆ ಮಾಡಿಸುತ್ತೇನೆ. ವಾದಿ ದಿಃ 29.11.2007 ರಲ್ಲಿ ಜನಿಸಿದ್ದರೂ ಸಹ ಸರಿಕಾರಿ ಸೌಲಭ್ಯವನ್ನು ಪಡೆಯಲು ದಿಃ 29-03-2009 ಎಂದು ತೋರಿಸಿ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ವಾದಿಯ ಜನನ ದಿನಾಂಕವನ್ನು ಸರಿಯಾಗಿ ನಮೂದು ಮಾಡಿಕೊಂಡಿದ್ದು ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ವಯಸ್ಸ ನ್ನು 2 ವರ್ಷ ಕಡಿಮೆ ತೋರಿಸಿ ಸೌಲಭ್ಯ ಪಡೆಯಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3) ನಿಪಿ-1 ರಿಂದ ನಿಪಿ-3,5,6 ರ ದಾಖಲೆಗಳನ್ನು ನಾನು ಸೃಷ್ಟಿ ಮಾಡಿಕೊಂಡು ಬಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು: ಪ್ರತಿವಾದಿ 1 ರ ಪರ ಮಾನ್ಯ ಎ ಜಿ ಪಿ ರವರಿಂದಃ**

ಪ್ರತಿವಾದಿ 2 ರ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.